## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 790/2017

ಸಾಕ್ಷಿಗೆ ದಿನಾಂಕ 04-07-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 7 P.W.: 4

| | | |
|---|---|---|
| ಹೆಸರು | ಃ | ತಿಪ್ಪೇಗುಂಡಿ ಕರಿಬಸಪ್ಪ |
| ತಂದೆಯ ಹೆಸರು | ಃ | ಹನುಮಂತಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಬನ್ನಿಕಲ್ಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ತಂಗಿ. ಆರೋಪಿತ ನನ್ನ ಮಾವ ಅಂದರೆ ಚಾಸಾ-1 ರವರ ಗಂಡ ಇರುತ್ತಾನೆ. ಚಾಸಾ-6 ನನ್ನ ತಂದೆ.

ಈಗ್ಗೆ ಸುಮಾರು 8-10 ವರ್ಷದ ಹಿಂದೆ ಆರೋಪಿ ಮತ್ತು ಚಾಸಾ-1 ರವರ ಮದುವೆಯು ಮೋರಿಗೇರಿ ಹತ್ತಿರ ಇರುವ ತಾತನ ಮಠದಲ್ಲಿ ಆಗಿರುತ್ತದೆ. ಮದುವೆ ಸಮಯದಲ್ಲಿ ಬಸಣ್ಣ, ಜಂಬಾರ ಹನುಮಪ್ಪ, ಚೌಟಗಿ ಉಮೇಶಪ್ಪ ಇನ್ನೂ ಅನೇಕ ಹಿರಿಯರಿದ್ದರು. ಮದುವೆಯಾದ ನಂತರ ಸುಮಾರು 7-8 ವರ್ಷದವರೆಗೆ ನನ್ನ ತಂಗಿ ಮತ್ತು ಮಾವ ಅನ್ಯೊನ್ಯವಾಗಿದ್ದರು. ಅವರಿಬ್ಬರಿಗೆ ಅಕ್ಷತಾ ಎನ್ನುವ ಒಂದು ಮಗು ಇದೆ. ಅವರಿಬ್ಬರೂ ಬನ್ನಿಕಲ್ಲು ಗ್ರಾಮದಲ್ಲಿ ವಾಸವಾಗಿದ್ದರು. ನಂತರ ನಮ್ಮ ಮಾವ ನನ್ನ ತಂಗಿಗೆ ಹೊಡೆ ಬಡಿ ಮಾಡುವುದು, ಕುಡಿದು ಬಂದು ಬೈಯುವುದು, ಬಹಳ ತೊಂದರೆಯನ್ನು ಕೊಟ್ಟಿರುತ್ತಾನೆ. ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಮತ್ತು ಮಾನಸಿಕವಾಗಿ ಹಿಂಸೆಯನ್ನು ಕೊಟ್ಟಿರುತ್ತಾನೆ. ಮನೆಯಿಂದ ಹೊರಗೆ ಹಾಕುವುದು ಮಾಡುತ್ತಿದ್ದ. ಗಲಾಟೆಯ ಕುರಿತು ಪಂಚಾಯ್ತಿಯನ್ನು ನಮ್ಮ ಮಾವನ ಮನೆಯ ಹತ್ತಿರ ಮಾಡಿರುತ್ತೇವೆ. ಪಂಚಾಯ್ತಿ ಸಮಯದಲ್ಲಿ ಚಾಸಾ-8 ರಿಂದ 10 ಮತ್ತು ಇತರರು ಹಾಜರಿದ್ದರು. ಪಂಚಾಯ್ತಿಯಲ್ಲಿ ಹಿರಿಯರು ಆರೋಪಿಗೆ ಬುದ್ಧಿವಾದ ಹೇಳಿದ್ದರು ಆದರೆ ಆರೋಪಿತನು ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾನೆ. ಚಾಸಾ-1 ರವರ ಮೇಲೆ ಶಂಕಿಸಿ ಅವಳನ್ನು ಕಿರುಕುಳ ಕೊಡುತ್ತಿದ್ದ. ಅವಳು ಈಗ ನಮ್ಮ ಮನೆಯಲ್ಲಿ ವಾಸವಾಗಿದ್ದಾಳೆ. ಘಟನೆಯ ಕುರಿತು ನನ್ನ ತಂಗಿ ಪ್ರಕರಣ ದಾಖಲಿಸಿದ್ದಾಳೆ. ಪೋಲೀಸರು ಪಂಚಾಯ್ತಿಗೆ ಬಂದಿದ್ದರು, ಪಂಚಾಯ್ತಿ ಮಾಡಿ ಸ್ಟೇಷನ್ನಿಗೆ ಹೋದರು. ಆ ಸಮಯದಲ್ಲಿ ನಾನು ಪೋಲೀಸರಿಗೆ ಘಟನೆಯ ಕುರಿತು ಹೇಳಿಕೆ ನೀಡಿದ್ದೇನೆ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ಆರೋಪಿತನು ನನ್ನ ತಂಗಿಗೆ ನೀನು ಬೇರೆಯವರ ಜೊತೆ ಸಂಬಂಧವನ್ನು ಇಟ್ಟುಕೊಂಡಿದ್ದೀಯಾ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಅಂತಾ ಜೀವಬೆದರಿಕೆ ಹಾಕುತ್ತಿದ್ದ ಎಂದರೆ ಸರಿ.

ಪಾಟೀ ಸವಾಲು. ಆರೋಪಿ ಪರ ಶ್ರೀ ಎನ್ ಜಿ ಬಿ ವಕೀಲರಿಂದಃ-

ಆರೋಪಿಯ ಸ್ವಂತ ಊರು ಸೊಬಟಿ ಗ್ರಾಮ ಇರುತ್ತದೆ. ಸದರಿಯವನ್ನು ಭೀಮಪ್ಪನ ಮನೆತನಕ್ಕೆ ಬಂದಿರುತ್ತಾನೆಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂಗಿಯನ್ನು ವಿವಾಹವಾಗಿದ್ದಾನೆನ್ನುತ್ತಾರೆ. ಸದರಿಯವನು ಭೀಮಪ್ಪನ ಮಗಳು ಹುಲಿಗೆಮ್ಮ ಇವರಿಗೆ ಮದುವೆಯಾಗಿದ್ದಾನೆಂದರೆ ಸರಿ. ಆರೋಪಿತನು ಸದರಿ ಮದುವೆಯನ್ನು ಸುಮಾರು 35 ವರ್ಷದ ಹಿಂದೆ ಆಗಿರುತ್ತಾನೆಂದರೆ ಸರಿ. ಇವತ್ತಿಗೂ ಸಹಾ ಆರೋಪಿತನು ಹುಲಿಗೆಮ್ಮ ಇವರ ಜೊತೆ ಬಾಳುವೆ ಮಾಡುತ್ತಾನೆಂದರೆ ಸರಿ. ಸದರಿಯವನ ಮಕ್ಕಳ ವಿವಾಹವು ಸಹಾ ಈಗಾಗಲೇ ಆಗಿದೆ ಎಂದರೆ ಸರಿ. ಇವತ್ತಿಗೂ ಸಹಾ ಆರೋಪಿತನು ಮತ್ತು ಹುಲಿಗೆಮ್ಮ ಚೆನ್ನಾಗಿದ್ದಾರೆಂದರೆ ಸರಿ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಆರೋಪಿತನು ಕುಡಿಯುತ್ತಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನು ಅವಾಚ್ಯವಾಗಿ ಬೈಯುತ್ತಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಗಲಾಟೆಯಾಗಿದ್ದು ಯಾವ ದಿನಾಂಕ ಎಂದರೆ ಸಾಕ್ಷಿಯು ಈಗ ಸುಮಾರು 10 ವರ್ಷವಾಯಿತು ಎನ್ನುತ್ತಾರೆ. ಗಲಾಟೆಯಾದ ಬಗ್ಗೆ ಠಾಣೆಯಲ್ಲಿ ದೂರು ನೀಡಿದ್ದೇನೆ. ಆ ರೀತಿ ಯಾವುದೇ ಗಲಾಟೆಯಾಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಮನೆಗೂ ಆರೋಪಿ ಮನೆಗೂ ಸುಮಾರು 200 ಮೀ ಅಂತರ ಇದೆ. ಆ ಕಾರಣದಿಂದಾಗಿ ಆರೋಪಿ ಮನೆಯಲ್ಲಿ ಏನು ನಡೆಯುತ್ತಿತ್ತು ಎಂದು ನನಗೆ ಗೊತ್ತಾಗುವುದಿಲ್ಲವೆಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಚಾಸಾ-1 ನನ್ನ ತಂಗಿಯಾಗಿರುವುದರಿಂದ ಅವಳಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಘಟನೆಯ ಕುರಿತು ಪಂಚಾಯ್ತಿ ನಡೆಯಿತು ಹಿರಿಯರು ಬುದ್ಧಿವಾದ ಹೇಳಿದರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹಿರಿಯರು ಪಂಚಾಯ್ತಿ ಮಾಡಿದು ನಿಖರ ದಿನಾಂಕ ನನಗೆ ಹೇಳಲು ಬರುವುದಿಲ್ಲ ಸುಮಾರು 10-12 ವರ್ಷವಾಗಿದೆ. ಆ ಬಗ್ಗೆ ಪಂಚಾಯ್ತಿಯಾಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನ ಮನೆಯ ಹತ್ತಿರ ಪಂಚಾಯ್ತಿಯಾಯಿತು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ಚಾಸಾ-1 ರವರು ಯಾವುದೇ ದೂರು ನೀಡಿಲ್ಲವೆಂದರೆ ಸರಿಯಲ್ಲ. ಚಾಸಾ-1 ರವರು ನನ್ನ ತಂಗಿಯಗಿರುವುದರಿಂದ ಅವಳಿಗೆ ಸಹಾಯವಾಗಲು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ